1. ಮಾಗೋಡು ಗ್ರಾಮದ ಕಂಬದ ರಂಗಸ್ವಾಮಿ ದೇವಾಲಯದ ಬಳಿ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸುವುದು.
2. ತಾವರೆಕೆರೆಯ ರಂಗನಾಥಸ್ವಾಮಿ ಧಾರ್ಮಿಕ ಕ್ಷೇತ್ರದಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸುವುದು.

ಈ) ಮಂಜೂರಾತಿ ನೀಡದಿದ್ದಲ್ಲಿ ಮಂಜೂರಾತಿ ನೀಡಲು ಕ್ರಮಕೈಗೊಳ್ಳಲಾಗುವುದೇ; (ಸಂಪೂರ್ಣ ವಿವರ ನೀಡುವುದು)?

ಅನುದಾನದ ಲಭ್ಯತೆಗನುಸಾರವಾಗಿ ಪರಿಶೀಲಿಸಿ ಡಾರ್ಮಿಟರಿಗಳ ನಿರ್ಮಾಣದ ಬಗ್ಗೆ ಅಗತ್ಯಕ್ರಮ ವಹಿಸಲಾಗುವುದು.

ಕರ್ನಾಟಕ ವಿಧಾನ ಸಭೆ

577 ಶ್ರೀ ಖಾದರ್ ಯು.ಟಿ

ಲೋಕೋಪಯೋಗಿ ಸಚಿವರು

ಅ) ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಲೋಕೋಪಯೋಗಿ ಇಲಾಖಾ ರಸ್ತೆಗಳು ದುಸ್ಥಿತಿಯಲ್ಲಿದ್ದು ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಂಚಾರ ದಟ್ಟಣೆ ಇರುವ ಈ ರಸ್ತೆಗಳನ್ನು ದುರಸ್ತಿಗೊಳಿಸುವ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲಾಗುವುದೇ;

ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯಡಿ 71.96 ಕಿ.ಮೀ ಉದ್ದದ ಒಟ್ಟು 16 ಜಿಲ್ಲಾ ಮುಖ್ಯ ರಸ್ತೆಗಳಿರುತ್ತವೆ. ಇವುಗಳ ಪೈಕಿ ರಾಷ್ಟ್ರೀಯ ಹೆದ್ದಾರಿ–48ನ್ನು ಅಭಿವೃದ್ಧಿಗಾಗಿ ಮುಚ್ಚಿದ್ದರಿಂದ, 5.00 ಕಿ.ಮೀ ಉದ್ದದ ಮಾಣಿ–ಉಳ್ಳಾಲ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಮಳೆ ನಿಂತ ನಂತರ ಈ ರಸ್ತೆಯ ನಿರ್ವಹಣೆ ಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯಗೊಳೀಸಲಾಗುವುದು. ಉಳಿದ 66.96 ಕಿ.ಮೀ ಉದ್ದದ ಇತರ ರಸ್ತೆಗಳ ನಿರ್ವಹಣೆಯನ್ನು ಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯವಾಗಿ ಇಡಲಾಗಿರುತ್ತದೆ.

ಕ್ಷೇತ್ರದಲ್ಲಿರುವ ಎಲ್ಲಾ ರಸ್ತೆಗಳನ್ನು ಲಭ್ಯ ಅನುದಾನದಲ್ಲಿ ದುರಸ್ತಿಗೊಳಿಸಿ ಸುಗಮ ಸ್ಥಿತಿಯಲ್ಲಿಡಲಾಗುತ್ತಿದೆ.

ಕರ್ನಾಟಕ ವಿಧಾನ ಸಭೆ

579 ಶ್ರೀ ಖಾದರ್ ಯು.ಟಿ

ಮಾನ್ಯ ಗೃಹ ಸಚಿವರು

ಅ) ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಲ್ಲಾ ಸಮುದಾಯದ ಯುವಕರ ಮೇಲೆ ಕ್ಷುಲಕ ಕಾರಣಗಳಿಗಾಗಿ ಪ್ರಕರಣಗಳನ್ನು (cases) ದಾಖಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಂತಹ ಪ್ರಕರಣಗಳು ದಾಖಲಾಗಿರುವುದಿಲ್ಲ.

ಆ) ಹಾಗಿದ್ದಲ್ಲಿ ಇವರುಗಳಲ್ಲಿ ಅಮಾಯಕ ವಿದ್ಯಾರ್ಥಿಗಳು ಸೇರಿರುವುದು ನಿಜವೇ;

ಅನ್ವಯಿಸುವುದಿಲ್ಲ.

ಇ) ಹಾಗಿದ್ದಲ್ಲಿ, ಇಂತಹ ಪ್ರಕರಣಗಳನ್ನು ಹಿಂದಕ್ಕೆ ಪಡೆಯಲು ಸರ್ಕಾರ ಉದ್ದೇಶಿಸಿದೆಯೇ?

ಅನ್ವಯಿಸುವುದಿಲ್ಲ.

ಸಂ:ಒಇ 09 ಸದನ 2009

ಸಹಿ/-
ಡಾ:ವಿ.ಎಸ್. ಆಚಾರ್ಯ
ಗೃಹ ಸಚಿವರು

(ಪಿ ಶಿವರಾಮ ಭಟ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ.(ಅಪರಾಧಗಳು)

580 ಶ್ರೀ ಖಾದರ್ ಯು.ಟಿ
ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು
ಪ್ರವಾಸೋದ್ಯಮ ಸ್ಥಳಗಳ ಗುರುತಿಸುವಿಕೆ.

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ಅಭಿವೃದ್ಧಿ ಪಡಿಸಲು ಗುರುತಿಸಲು ಸ್ಥಳಗಳು ಯಾವುವು; (ತಾಲ್ಲೂಕುವಾರು ವಿವರ ನೀಡುವುದು);

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕೆಳಕಂಡ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

ಮಂಗಳೂರು ತಾಲ್ಲೂಕು:

1. ಪಣಂಬೂರು
2. ಪಿಲಿಕುಲ ನಿಸರ್ಗಧಾಮ (ಮುಡುಶೆಡ್ಡೆ)
3. ತಣ್ಣೀರುಭಾವಿ
4. ಉಲ್ಲಾಳ

ಬಂಟವಾಳ ತಾಲ್ಲೂಕು:

1. ವಗ್ಗಾ ಗ್ರಾಮದ ಕಾರಂಜೇಶ್ವರ ದೇವಾಲಯ.

The following tourism places have been identified for development in Dakshina Kannada District.

Mangalore Taluk:

1. Panambur
2. Pilikula (Mudushedde)